ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **1317/2023**

| | | | |
|---|---|---|---|
| ಸಾಕ್ಷಿಯ ಹೆಸರು | : ಶ್ವೇತ.ಬಿ | | ಸಿ.ಡಬ್ಲ್ಯೂ 7 |
| ಗಂಡನ ಹೆಸರು | : | ದಿಲೀಪ್ ಕುಮಾರ್ | ಪಿ.ಡಬ್ಲ್ಯೂ 4 |
| ವಯಸ್ಸು | : | 37 ವರ್ಷ | |
| ಉದ್ಯೋಗ | : | ಅಬಕಾರಿ ನಿರೀಕ್ಷಕರು | |
| ವಾಸ ಸ್ಥಳ | : | ಚನ್ನಗಿರಿ | |

ದಿನಾಂಕಃ**21-11-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2021 - 2024 ನೇ ಸಾಲಿನಲ್ಲಿ ತರೀಕೆರೆಯಲ್ಲಿ ಅಬಕಾರಿ ನಿರೀಕ್ಷಕರು ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 20.04.2023 ರಂದು ಪ್ರಕರಣದ ಕಡತ ಮತ್ತು ಮು.ಮಾ ಅನ್ನು ಚಾಸ-1 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿದ್ದೇನೆ. ದಿನಾಂಕ 24.04.2023 ರಂದು ಚಾಸ-5 ರವರೊಂದಿಗೆ ಮು.ಮಾ ಅನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದೇನೆ. ದಿನಾಂಕ 27.04.2023 ರಂದು ಸಾಕ್ಷಿದಾರರ ಹೇಳಿಕೆಗಳನ್ನು ಕೂಡ ಪಡೆದುಕೊಂಡಿದ್ದೇನೆ. ದಿನಾಂಕ 02.05.2023 ರಂದು ದ್ವಿಚಕ್ರ ವಾಹನದ ಕುರಿತು ಎ.ಆರ್.ಟಿ.ಒ ರವರೊಂದಿಗೆ ಪತ್ರ ವ್ಯವಹಾರ ಮಾಡಿದ್ದೇನೆ ಮತ್ತು ದಾಖಲೆಯನ್ನು ಪಡೆದುಕೊಂಡಿದ್ದೇನೆ. ದಿನಾಂಕ 06.07.2023 ರಂದು ಪ್ರಕರಣದ ಮು.ಮಾ ರಾಸಾಯನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡಿದ್ದೇನೆ. ನಂತರದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ. ಬಿ.ಎಕ್ಸ್ಟ್ರಾಕ್ಟ್ ಪ್ರತಿಯನ್ನು ನಿಪಿ-6 ಎಂದು, ಎಫ್.ಎಸ್.ಎಲ್ ವರದಿಯನ್ನು ನಿಪಿ-7, ಸಹಿಯನ್ನು 7(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಾನು ಹೇಳಿದಂತೆ ನಾನು ಸಾಕ್ಷಿದಾರರು ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷಾ ವರದಿಯನ್ನು ಈ ಪ್ರಕರಣಕ್ಕೆ ಅನುಕೂಲ ಆಗುವ ರೀತಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸರಿಯಾದ ಮಾಹಿತಿ ಲಭ್ಯವಿಲ್ಲದ ಕಾರಣ ಯಾವ ಅಂಗಡಿಯಿಂದ ಮದ್ಯವನ್ನು ತಂದಿದ್ದಾರೆ ಎಂಬ ಬಗ್ಗೆ ನಾನು ವಿಚಾರಣೆ ನಡೆಸಿಲ್ಲ ಮತ್ತು ಆ ಬಗ್ಗೆ ದೋಷಾರೋಪಣಾ ಪಟ್ಟಿಯಲ್ಲಿ ನಮೂದು ಮಾಡಿಲ್ಲ. ಠಾಣೆಯ ಅಂಖ್ಯೆ-ಸಂಖ್ಯೆಗೋಸ್ಕರ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.